ಉ) ಪ್ರತಿ ವರ್ಷ ರೂ. 5,00,000 ವೆಚ್ಚವಿದ್ದು ಆದಾಯದಲ್ಲಿದೆ.

ಊ) ಕೇಂದ್ರದಲ್ಲಿ ರಿಸರ್‌ವಾಯರ್ ಹತ್ತಿರ 100 ಅಡಿ (ಚಾರಸದಲ್ಲಿ) ಫಾರಂ ಪಾಂಡ್ (ಕ್ಷೇತ್ರ ನೀರಿನ ಹೊಂಡ) ನಿರ್ಮಿಸಿ ನೀರಾವರಿ ಸೌಕರ್ಯ ಹೆಚ್ಚಿಸುವುದು. ಚೆಕ್‌ಬಂಡ್ ನಿರ್ಮಾಣ ಮಾಡಿ ಭೂ ಸವಕಳಿ ತಡೆಯುವುದು. ಬೀಜೋತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಕಾರ್ಯಕ್ರಮ ಯೋಜಿಸಲಾಗಿದೆ.

ವಿಷಯ:- ಶಿಕಾರಿಪುರ ಬಾಲವಿಕಾಸ ಯೋಜನೆಗೆ ಬೀಜ ಒದಗಿಸುವುದು.

1167(1185) ಶ್ರೀ ಬಿ.ಎಸ್. ಯಡಿಯೂರಪ್ಪ, (ಶಿಕಾರಿಪುರ):- ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗೆ ಜೀಪು ಒದಗಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಶ್ರೀಮತಿ. ವಿಮಲಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಶಿಕಾರಿಪುರದಲ್ಲಿನ ಮಹಿಳಾ ಹಾಗೂ ಮಕ್ಕಳ ಕಲ್ಯಾಣ, ಸಮಗ್ರ ಬಾಲವಿಕಾಸ ಯೋಜನೆಯ ಕಛೇರಿಗೆ ಈಗಾಗಲೇ ಒಂದು ಜೀಪು ಒದಗಿಸಲಾಗಿದೆ.

ವಿಷಯ:- ಅಂಗನವಾಡಿ ಕಟ್ಟಡಗಳಿಗೆ ಮ್ಯಾಚಿಂಗ್ ಗ್ರ್ಯಾಂಟ್

1168(1185 ಎ) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಗನವಾಡಿ ಕಟ್ಟಡಕ್ಕೆ 30 ಸಾವಿರ ರೂ.ಗಳನ್ನು ನೀಡುತ್ತಿದ್ದು ಮ್ಯಾಚಿಂಗ್ ಗ್ರ್ಯಾಂಟ್ ನೀಡದಿರುವುದರಿಂದ ಕಟ್ಟಡಗಳ ಪ್ರಗತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಸಮಸ್ಯೆ ಪರಿಹರಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀಮತಿ. ವಿಮಲಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಇಲಾಖೆಯು ನೀಡುತ್ತಿರುವ 30,000 ರೂ.ಗಳ ಜೊತೆಗೆ ಜಿಲ್ಲಾ ಪಂಚಾಯತ್‌ಗಳಲ್ಲಿ ಲಭ್ಯವಿರುವ ಜವಾಹರ್ ರೋಜ್‌ಗಾರ್ ಯೋಜನೆ, ಇವಿಎಸ್, ಮೈರಾಡ, ಹೆಚ್‌ಕೆಡಿಪಿ, ಜಿಎಡಿಸಿ, ಎಂಎಡಿಪಿ ಮುಂತಾದ ಯೋಜನೆಗಳಡಿ ಹಣವನ್ನು ಉಪಯೋಗಿಸಿಕೊಂಡು ಅಂಗನವಾಡಿ ಕಟ್ಟಡಗಳನ್ನು ಪೂರ್ಣಗೊಳಿಸಲು ಜಿಲ್ಲಾ ಪಂಚಾಯತ್‌ಗಳು ಮತ್ತು ತಾಲ್ಲೂಕು ಪಂಚಾಯತಿ ಸಮಿತಿಗಳು ಕ್ರಮ ಕೈಗೊಳ್ಳುತ್ತಿವೆ.

ಅಧ್ಯಕ್ಷರು:- ಮಂಡಿಸಲಾಯಿತು.

4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ:- ಬ್ಯಾಕ್‌ಲಾಗ್ ವಿಚಾರದ ಕುರಿತು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೇ, ನಾನು ಬಹುಶಃ ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುತ್ತೀರಿ ಎಂದು ಭಾವಿಸಿದ್ದೆ. ಆದರೆ ತಾವು ಹೇಳಿದಮೇಲೆ ಚರ್ಚೆಯ ನಂತರವೇ ಇದನ್ನು ತೆಗೆದುಕೊಳ್ಳಬೇಕು ಎಂದಮೇಲೆ ನಾನು ಪುನಃ ತಮ್ಮ ಅಪ್ಪಣೆ ಪಡೆದು ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ವಾರದಲ್ಲಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ತಾವು ಹೇಳಿದಿರಿ, ಇದು ಬಹಳ ಗಂಭೀರವಾದ ವಿಷಯ ಇದೆ, ಅದಕ್ಕಾಗಿ ಇದರ ಬಗ್ಗೆ ಒಂದು ಸವಿಸ್ತಾರ ಚರ್ಚೆ ಆಗುವುದು ಸೂಕ್ತ, ಅದಕ್ಕಾಗಿ ಅರ್ಧ ಗಂಟೆಯಾಗಲಿ ಒಂದು ಗಂಟೆಯಾಗಲಿ ಚರ್ಚೆ ಮಾಡೋಣ ಎನ್ನುವ ಅಭಿಪ್ರಾಯದ ಮೇರೆಗೆ ಆ ದಿವಸ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಆಗಲಿಲ್ಲ. ಇವತ್ತು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಬಹಳ ಗಂಭೀರವಾಗಿದೆ. ಈ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಎಂಪ್ಲಾಯೀಸ್ ಅಪಾಯಿಂಟ್‌ಮೆಂಟ್ ಏನು ಇದೆ, ಇದು ಬ್ಯಾಕ್‌ಲಾಗ್ ಫಿಲಪ್ ಆಗುವುದು ಒಂದು ಕಡೆ. ಎರಡನೆಯದು ರಿಸರ್ವೇಷನ್ ಇನ್ ಪ್ರಮೋಷನ್ ಅದು ಬ್ಯಾಕ್‌ಲಾಗ್ ಇರುವುದು ಇನ್ನೊಂದು ಕಡೆ ಮತ್ತು ಈಗ ಇರುವ ಸರ್ಕಾರಿ ಆಜ್ಞೆ ಏನಿದೆ; 1992ರಲ್ಲಿ ರಿಸರ್ವೇಷನ್ ಇನ್ ಪ್ರಮೋಷನ್ ಆರ್ಡರ್ ಈಗಾಗಲೇ ಕೆ.ಎ.ಟಿ.ಯವರು ಸ್ಟೈಕ್ ಡೌನ್ ಏನು ಮಾಡಿದ್ದಾರೆ, ಆ ಕೆ.ಎ.ಟಿ.ಯ ಸ್ಟೈಕ್ ಡೌನ್ ಮಾಡಿದ ಮೇಲೆ ಸರ್ಕಾರದವರು ಏನು ಅಪೀಲು ಹಾಕಬೇಕಾಗಿತ್ತು, ಆ ಅಪೀಲು ಕೂಡ ಇನ್ನೂವರೆಗೆ ಅನೇಕ ಕೇಸ್‌ಗಳಲ್ಲಿ ಹಾಕಿಲ್ಲ. ಆ ದಿವಸ ಅಂದರೆ ಮೊನ್ನೆ ನಾನು ಈ ಸಿರಿಕಲ್ಚರ್ ಒಂದೇ ಒಂದು ಇಲಾಖೆಯದು ತಮ್ಮ ಗಮನಕ್ಕೆ ತಂದೆ. ಆಗ ಸ್ಪಷ್ಟವಾಗಿ ಸರ್ಕಾರದವರೂ ಕೂಡ ಒಪ್ಪಿಕೊಂಡರು. ಆ ಒಂದು ಕೌಂಟರ್ ಅಫಿಡವಿಟ್ ಹಾಕತಕ್ಕಂಥದ್ದು ಅಥವಾ ಕೌಂಟರ್ ಸ್ಟೇಟ್‌ಮೆಂಟ್ ಮಾಡುವಂಥ ಕೆಲಸವನ್ನು ನಮ್ಮವರು ಮಾಡಿಲ್ಲ, ಅಲ್ಲಿ ಲೋಪವಾಗಿದೆ ಎಂದು ನಾವು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು ಸರ್ಕಾರದವರು ಹೇಳಿದರು. ಆದರೆ ಆ ಒಂದು ಕೇಸ್‌ನಲ್ಲಿ ಅಲ್ಲ, ನಾನು ನೋಡಿದ್ದೇನೆ, ಉಳಿದಂಥ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಾಗಲಿ ಮತ್ತು ಕೆಲವು ಬೇರೆ ಇಲಾಖೆಗಳಲ್ಲೂ ಕೂಡ ಈ ಪರಿಸ್ಥಿತಿ ಇವತ್ತು ಉದ್ಭವಿಸಿದೆ. ಮೊನ್ನೆ ಸುಮಾರು 10-15 ದಿವಸಗಳ ಹಿಂದೆ ಮಾತ್ರ ಈ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೋಸ್ಟ್‌ಗೆ ಅಥವಾ ಕ್ಲಾಸ್–(1) ಸೀನಿಯರ್ ಸ್ಕೇಲ್ ಪೋಸ್ಟ್‌ಗೂ ಕೂಡ ಪ್ರಮೋಷನ್ ಕೊಡುವುದರ ಬಗ್ಗೆ ಒಂದು ಅಪೀಲು ಫೈಲ್ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ.

1.20 ಪಿ.ಎಂ

ಆದರೆ ಅದು ಕೂಡ ಇವತ್ತು ಪೂರ್ತಿ ಆಗಿಲ್ಲ. ಇವತ್ತು ಒಂದು ವಾದ ನಮ್ಮ ಮುಂದೆ ಏನು ಬರುತ್ತಿದೆ